ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ
ಬೆಂಗಳೂರು –560001.

ಸಂಖ್ಯೆ: ಸಿಐ 76 ಎಸ್‌ಎಸ್‌ಐ 2019 (ಭಾ-1) ದಿನಾಂಕ: 22.02.2022

# ಪರಿಷ್ಕೃತ ತಿದ್ದುಪಡಿ ಆದೇಶ

ಸರ್ಕಾರಿ ಆದೇಶ ಸಂಖ್ಯೆ: ಸಿಐ 76 ಎಸ್‌ಎಸ್‌ಐ 2019 ದಿನಾಂಕ: 28.05.2020 ರಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕೈಗಾರಿಕಾ ನಿವೇಶನ/ ಶೆಡ್ ಗಳನ್ನು ನೀಡುವಲ್ಲಿ ಹಾಲಿ ಇರುವ ಸಹಾಯಧನವನ್ನು ಶೇ.50 ರಿಂದ ಶೇ.75ಕ್ಕೆ ಹೆಚ್ಚಿಸಿ ಜಾರಿಗೊಳಿಸಲಾಗಿದ್ದು, ಸದರಿ ಆದೇಶದಲ್ಲಿ ವಿಧಿಸಲಾಗಿರುವ ಷರತ್ತು ಮತ್ತು ನಿಬಂಧನೆಗಳನ್ನು ಮಾರ್ಪಡಿಸಿ ತಿದ್ದುಪಡಿ ಆದೇಶ ಸಂಖ್ಯೆ: ಸಿಐ 76 ಎಸ್‌ಎಸ್‌ಐ 2019, ದಿನಾಂಸಕ:16.02.2021 ನ್ನು ಹೊರಡಿಸಲಾಗಿರುತ್ತದೆ.

ಸದರಿ ತಿದ್ದುಪಡಿ ಆದೇಶದ ಕ್ರಮ ಸಂಖ್ಯೆ: 4 ರಲ್ಲಿನ ಷರತ್ತು/ನಿಬಂಧನೆಯ ಅಂಶಕ್ಕೆ ಪರಿಷ್ಕೃತ ತಿದ್ದುಪಡಿ ಆದೇಶ ಸಂಖ್ಯೆ: ಸಿಐ 76 ಎಸ್‌ಎಸ್‌ಐ 2019 (ಭಾ-1), ದಿನಾಂಕ: 30.11.2021 ನ್ನು ಹೊರಡಿಸಲಾಗಿರುತ್ತದೆ.

ಸದರಿ ಆದೇಶ ಸಂಖ್ಯೆ: ಸಿಐ 76 ಎಸ್‌ಎಸ್‌ಐ 2019 (ಭಾ-1), ದಿನಾಂಕ: 30.11.2021 ನ್ನು ಹಿಂಪಡೆದು, ತಿದ್ದುಪಡಿ ಆದೇಶ ಸಂಖ್ಯೆ: ಸಿಐ 76 ಎಸ್‌ಎಸ್‌ಐ 2019, ದಿನಾಂಕ: 16.02.2021 ರ ಕ್ರಮ ಸಂಖ್ಯೆ: 4 ರಲ್ಲಿನ ಷರತ್ತು/ನಿಬಂಧನೆಯ ಅಂಶದಲ್ಲಿನ, *"ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮ ನಿಯಮಿತ ಗಳಿಂದ ಹಂಚಿಕೆ ಮಾಡಿ ನಿವೇಶನ/ ಶೆಡ್ ನ ಶೇ.75ರಷ್ಟು ರಿಯಾಯಿತಿ ಪರಿಗಣಿಸಿ ಉಳಿದ ಮೊತ್ತ ಪಾವತಿಸಲು ಫಲಾನುಭವಿಗೆ ಹಂಚಿಕೆ ಪತ್ರ ನೀಡಬೇಕು. ಹಂಚಿಕೆ ಪತ್ರದಲ್ಲಿ ನಮೂದಿಸಿದ ಬಾಕಿ (ಶೇ.25) ಮೊತ್ತದ ಶೇ.10 ರಷ್ಟು ಮೊತ್ತ ಪಾವತಿಸಿದ ನಂತರ ನಿವೇಶನವನ್ನು ಫಲಾನುಭವಿಗೆ ಸ್ವಾಧೀನ ಪತ್ರದ ಮೂಲಕ ನೀಡುವುದು. ಉಳಿದ ಶೇ.15 ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮ ಕಂತುಗಳಲ್ಲಿ ಬಡ್ಡಿ ಸಹಿತವಾಗಿ ಪಡೆಯಬೇಕು. ಫಲಾನುಭವಿಯು ಸಲ್ಲಿಸಿದ ಜಾತಿ ಪ್ರಮಾಣ ಪತ್ರದ ಪ್ರತಿ, ಆಧಾರ್ ಸಂಖ್ಯೆ ದಾಖಲಾತಿ ಮತ್ತು ಸ್ವಾಧೀನ ನೀಡಲಾದ ಪತ್ರದ ಪ್ರತಿಯನ್ನು ದೃಢೀಕರಿಸಿ ಸದರಿ ಮಂಡಳಿ/ ನಿಗಮದ ಕಚೇರಿಯಲ್ಲಿಯೇ ನಿರ್ವಹಿಸುವುದು ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಫಲಾನುಭವಿಯ ವಿವರಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು."*

ಎನ್ನುವಲ್ಲಿ

*"ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮ ನಿಯಮಿತ ಗಳಿಂದ ಹಂಚಿಕೆ ಮಾಡಿ ನಿವೇಶನ/ ಶೆಡ್ ನ ಶೇ.75 ರಷ್ಟು ರಿಯಾಯಿತಿ ಪರಿಗಣಿಸಿ ಉಳಿದ ಮೊತ್ತವನ್ನು ಫಲಾನುಭವಿಯು ಪಾವತಿಸಬೇಕು. ಫಲಾನುಭವಿಯು ತಾನು ಪಾವತಿಸಬೇಕಾದ ವಂತಿಕೆ ಶೇ.25 ಕ್ಕೆ ಸಂಬಂಧಿಸಿದಂತೆ, ಒಟ್ಟು ಹಂಚಿಕೆ ಮೌಲ್ಯದ (ಶೇ.100) ರ ಪೈಕಿ ಶೇ.10 ರಷ್ಟು ಮೊತ್ತ ಪಾವತಿಸಿದ ನಂತರ ಫಲಾನುಭವಿಗೆ ಹಂಚಿಕೆ ಪತ್ರ ನೀಡುವುದು ಮತ್ತು ಸ್ವಾಧೀನ ಪತ್ರದ ಮೂಲಕ ನಿವೇಶನವನ್ನು ನೀಡುವುದು. ಒಟ್ಟು ಹಂಚಿಕೆ ಮೌಲ್ಯದ ಉಳಿದ ಶೇ.15 ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮ ಕಂತುಗಳಲ್ಲಿ ಬಡ್ಡಿ ಸಹಿತವಾಗಿ ಪಡೆಯಬೇಕು. ಫಲಾನುಭವಿಯು ಸಲ್ಲಿಸಿದ ಜಾತಿ ಪ್ರಮಾಣ ಪತ್ರದ ಪ್ರತಿ, ಆಧಾರ್ ಸಂಖ್ಯೆ ದಾಖಲಾತಿ ಮತ್ತು ಸ್ವಾಧೀನ ನೀಡಲಾದ ಪತ್ರದ ಪ್ರತಿಯನ್ನು ದೃಢೀಕರಿಸಿ ಸದರಿ ಮಂಡಳಿ/ ನಿಗಮದ ಕಚೇರಿಯಲ್ಲಿಯೇ ನಿರ್ವಹಿಸುವುದು ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಫಲಾನುಭವಿಯ ವಿವರಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು."* ಎಂದು ಓದಿಕೊಳ್ಳತಕ್ಕದ್ದು, ಉಳಿದಂತೆ, ಸದರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

22/2/22

(ಸ್ವರೂಪ್ ಪವಾರ್)
ಪೀಠಾಧಿಕಾರಿ (ಸಪ್ರುಕ್ರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಪ್ರುಕ್ರ)

Contd/-